# ಖುರ್‌ಆನ್ ಅನುಗ್ರಹಗಳ ದ್ವಾರ

ಮನುಷ್ಯನು ಪ್ರಪಂಚದಲ್ಲಿರುವ ಅತೀ ಉತ್ಕೃಷ್ಟವಾದ ಜೀವಿಯಾಗಿದ್ದಾನೆ. ಆ ಮನುಷ್ಯನು ಆತನನ್ನು ಸೃಷ್ಟಿಸಿದ ಸೃಷ್ಟಿಕರ್ತನ ನಿಯಮಗಳಿಗೆ ವಿಧೇಯನಾಗಿ ಜೀವಿಸಬೇಕು. ದೈವಿಕ ನಿಯಮಗಳನ್ನು ಕಾಲಾಕಾಲಗಳಲ್ಲಿ ಮನುಷ್ಯರಿಗೆ ಕಲಿಸಿ ಕೊಡಲಿಕ್ಕಾಗಿ ವೇದ ಗ್ರಂಥಗಳ ಮೂಲಕ ಪ್ರವಾದಿಗಳನ್ನು ಅಲ್ಲಾಹನು ನಿಯೋಗಿಸಿದನು. ಪ್ರವಾದಿ ಶೃಂಗಲೆಯ ಕೊನೆಯ ಪ್ರವಾದಿಯಾದ ಪ್ರವಾದಿ ಮುಹಮ್ಮದ್(ﷺ)ರವರ ಮೂಲಕ ಲೋಕ ವಿಮೋಚನೆಗೆ ಅಲ್ಲಾಹನು ಅವತೀರ್ಣಗೊಳಿಸಿದ ವೇದಗ್ರಂಥವೇ ಪವಿತ್ರ ಖುರ್‌ಆನ್. ಇಂದು ವೇದಗ್ರಂಥಗಳೆಂದು ಹೇಳಲ್ಪಡುವ ಗ್ರಂಥಗಳಲ್ಲಿ ಸ್ವಯಂ ದೈವಿಕವೆಂದು ವಾದಿಸುವ ಏಕೈಕ ಗ್ರಂಥ. ಹದಿನಾಲ್ಕು ಶತಮಾನದಿಂದ ಯಾವುದೇ ತಿದ್ದುಪಡಿಗೊಳಪಡದೆ ನೆಲೆಗೊಳ್ಳುತ್ತಿರುವ ಏಕೈಕ ಗ್ರಂಥ. ಸರ್ವ ರೀತಿಯಲ್ಲೂ ಸನ್ಮಾರ್ಗದೆಡೆಗೆ ಮುನ್ನೆಡೆಸುವ ಗ್ರಂಥ. ಲೋಕ ನಿವಾಸಿಗಳಿಗೆ ನೀತಿಯೇನು ಅನೀತಿಯೇನು ಎಂದು ಕಲಿಸುವ ಪವಿತ್ರ ಗ್ರಂಥ.

ಪವಿತ್ರ ಖುರ್‌ಆನನ್ನು ಕಲಿತು, ಅದನ್ನು ಅನುಸರಿಸುವ ಮೂಲಕ ಜೀವನದಲ್ಲಿ ಅಳವಡಿಸಬೇಕಾದುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಪವಿತ್ರ ಖುರ್‌ಆನ್ ಎಂದರೇನು? ಅದರಲ್ಲಿ ಅಡಕವಾಗಿರುವ ಆದರ್ಶವೇನು? ಮೊದಲಾದ ವಿಷಯಗಳನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಮುಸ್ಲಿಮರ ಕೈಗಳಲ್ಲಿರುವ ಈ ಪವಿತ್ರ ಗ್ರಂಥ ಸರ್ವ ಮಾನವರಿಗಿರುವ ಪವಿತ್ರ ಗ್ರಂಥವಾಗಿದೆ. ಪವಿತ್ರ ಖುರ್‌ಆನನ್ನು ಕಲಿತವರು ಕಲಿಯದವರಿಗೆ ಕಲಿಸಿ ಕೊಡುವುದು ಅವರ ಬಾಧ್ಯತೆಯಾಗಿದೆ. ಕಲಿಯದವರು ಕಲಿಯಲು ಪ್ರಯತ್ನಿಸಬೇಕು. ಈ ಕಿರು ಲೇಖನದಲ್ಲಿ ಪವಿತ್ರ ಖುರ್‌ಆನನ್ನು ಕಲಿಯುವುದರ ಮತ್ತು ಪಾರಾಯಣ ಮಾಡುವುದರ ಶ್ರೇಷ್ಠತೆಯನ್ನು ವಿವರಿಸಲಾಗುವುದು.

## ಅತೀ ಉತ್ತಮವಾದುದರೆಡೆಗೆ ಮುನ್ನೆಡೆಸುವ ಗ್ರಂಥ

ಪವಿತ್ರ ಖುರ್‌ಆನನ್ನು ಕಲಿತು ಅದನ್ನು ಜೀವನದಲ್ಲಿ ಅಳವಡಿಸುವುದಾದರೆ ಅತೀ ಉತ್ತಮವಾದ ಮಾರ್ಗದಲ್ಲಿ ಮುಂದಡಿಯಿಡಲು ಸಾಧ್ಯವಾಗುವುದು. ಅಲ್ಲಾಹನು ನುಡಿಯುತ್ತಾನೆ:

إِنَّ هَذَا الْقُرْآنَ يَهْدِي لِلَّتِي هِيَ أَقْوَمُ وَيُبَشِّرُ الْمُؤْمِنِينَ الَّذِينَ يَعْمَلُونَ الصَّالِحَاتِ أَنَّ لَهُمْ أَجْرًا كَبِيرًا

“ಖಂಡಿತ ಈ ಖುರ್‌ಆನ್ ಅತೀ ನೇರವಾದುದರೆಡೆಗೆ ಮುನ್ನೆಡೆಸುವುದು ಮತ್ತು ಸತ್ಕರ್ಮ ಎಸಗುವ ಸತ್ಯವಿಶ್ವಾಸಿಗಳಿಗೆ ಹಿರಿದಾದ ಪ್ರತಿಫಲವಿದೆ ಎಂಬ ಶುಭವಾರ್ತೆಯನ್ನು ತಿಳಿಸಿರಿ.”(ಖುರ್‌ಆನ್– ಇಸ್ರಾಅ್: 9)

## ಅತೀ ಉತ್ತಮರು

ಪವಿತ್ರ ಖುರ್‌ಆನನ್ನು ಕಲಿಯುವವರು ಮತ್ತು ಕಲಿಸುವವರು ಅಲ್ಲಾಹನ ಬಳಿ ಅತೀ ಉತ್ತಮರು. ಪ್ರವಾದಿ(ﷺ)ರವರ ನುಡಿದರು: خيركم من تعلم القرآن وعلمه “ನಿಮ್ಮಲ್ಲಿ ಅತೀ ಉತ್ತಮರು ಖುರ್‌ಆನನ್ನು ಕಲಿಯುವವರು ಮತ್ತು ಕಲಿಸುವವರಾಗಿದ್ದಾರೆ” (ಬುಖಾರಿ).

## ಖುರ್‌ಆನ್ ಶಿಫಾರಸ್ಸು ಮಾಡುವುದು.

ಪವಿತ್ರ ಖರ್‌ಆನ್ ಪಾರಾಯಣ ಗೈಯ್ಯುವವರಿಗೆ ಪರಲೋಕದಲ್ಲಿ ಖುರ್‌ಆನ್ ಅಲ್ಲಾಹನಲ್ಲಿ ಶಿಪಾರಸ್ಸು ಮಾಡುವುದು. ಪ್ರವಾದಿ(ﷺ)ರವರು ಹೇಳುತ್ತಾರೆ: ನೀವು ಖುರ್‌ಆನ್ ಪಾರಾಯಣ ಗೈಯ್ಯಿರಿ. ಕಾರಣ ಅಂತ್ಯ ದಿನದಂದು ಅದು ಪಾರಾಯಣ ಮಾಡಿದವರಿಗಾಗಿ ಶಿಫಾರಸ್ಸು ಮಾಡುವುದು”(ಮುಸ್ಲಿಂ)

## ಪ್ರಯಾಸಪಟ್ಟು ಪಾರಾಯಣ ಗೈಯ್ಯುವವರಿಗೆ ದ್ವಿಪ್ರತಿಫಲ

ಪವಿತ್ರ ಖುರ್‌ಆನ್‌ನ ಅವತೀರ್ಣ ಭಾಷೆಯಾದ ಅರಬಿಯನ್ನು ಕಲಿಯಲು ಪ್ರತಿಯೊಬ್ಬ ಮುಸ್ಲಿಮನು ಪರಿಶ್ರಮಿಸಬೇಕಾಗಿದೆ. ಕಾರಣ ಖುರ್‌ಆನಿನ ನೈಜ ಆಶಯವನ್ನು ಮತ್ತು ಅರ್ಥವನ್ನು ಅರಬಿ ಬಾಷೆ ಕಲಿತರೆ ಮಾತ್ರವೇ ತಿಳಿಯಲು ಸಾಧ್ಯ. ಹೀಗೆ ಅರಬಿ ಕಲಿಯುತ್ತಿರುವ ಒಬ್ಬರು ಅಕ್ಷರಗಳನ್ನು ಜೋಡಿಸಿ ಪ್ರಯಾಸಪಟ್ಟು ಖುರ್‌ಆನ್ ಪಾರಾಯಣ ಗೈದರೆ ಆತನಿಗೆ ದ್ವಿಪ್ರತಿಫಲವಿದೆ" (ಮುತ್ತಫಕುನ್ ಅಲೈಹಿ)

## ಖುರ್‌ಆನ್ ಪಾರಾಯಣ ಗೈಯ್ಯುವವರ ಉಪಮೆ

ಖುರ್‌ಆನ್ ಪಾರಾಯಣ ಗೈಯ್ಯುವ ಸತ್ಯವಿಶ್ವಾಸಿಗಳನ್ನು ಪ್ರವಾದಿ(ﷺ)ರವರು ಉಪಮಿಸಿರುವುದನ್ನು ಗಮನಿಸಿರಿ: "ಖುರ್‌ಆನ್ ಪಾರಾಯಣ ಗೈಯ್ಯುವ ಸತ್ಯವಿಶ್ವಾಸಿಯ ಉಪಮೆ ಉತ್ತಮ ಪರಿಮಳವಿರುವ ಮತ್ತು ರುಚಿಯಿರುವ ಲಿಂಬೆ ಹಣ್ಣಿನಂತೆಯಾಗಿದೆ, ಖುರ್‌ಆನ್ ಪಾರಾಯಣ ಗೈಯ್ಯದ ವಿಶ್ವಾಸಿಗಳ ಉಪಮೆ ಪರಿಮಳವಿಲ್ಲದ ರುಚಿಯಿರುವ ಖರ್ಜೂರದಂತೆಯಾಗಿದೆ,... (ಮುತ್ತಫಕುನ್ ಅಲೈಹಿ)

## ಒಂದು ಅಕ್ಷರಕ್ಕೆ ಹತ್ತು ಪ್ರತಿಫಲ

ಖುರ್‌ಆನ್ ಪಾರಾಯಣ ಗೈಯ್ಯುವುದು ಅಲ್ಲಾಹನ ಬಳಿ ತುಂಬಾ ಪ್ರತಿಫಲವಿರುವ ಕರ್ಮವಾಗಿದೆ. ಪ್ರತಿಯೊಂದು ಅಕ್ಷರಕ್ಕೆ ಹತ್ತು ಪ್ರತಿಫಲವಿದೆ. ಪ್ರವಾದಿ(ﷺ)ರವರು ನುಡಿದರು: ಯಾರಾದರೂ ಖುರ್‌ಆನಿನಿಂದ ಒಂದು ಅಕ್ಷರ ಪಾರಾಯಣ ಗೈದರೆ ಆತನಿಗೆ ಒಂದು ಒಳಿತಿದೆ. ಪ್ರತಿಯೊಂದು ಒಳಿತು ಹತ್ತು ಒಳಿತಿಗೆ ಸಮಾನವಾಗಿದೆ. ಅಲಿಫ್-ಲಾಮ್-ಮೀಮ್ ಎಂಬುವುದನ್ನು ನಾನು ಒಂದಕ್ಷರವೆನ್ನುವುದಿಲ್ಲ. ಅಲಿಫ್ ಒಂದು ಅಕ್ಷರ, ಲಾಮ್ ಒಂದು ಅಕ್ಷರ, ಮೀಮ್ ಇನ್ನೊಂದು ಅಕ್ಷರವಾಗಿದೆ" (ದಾರಿಮಿ, ತಿರ್ಮಿದಿ).

## ಮನೆಗಳನ್ನು ಖಬರಿನಂತೆ(ಸ್ಮಶಾನದಂತೆ) ಮಾಡದಿರಿ

ಮನೆಗಳಲ್ಲಿ ಖುರ್‌ಆನ್ ಕಲಿಯಿರಿ ಮತ್ತು ಪಾರಾಯಣ ಗೈಯ್ಯಿರಿ. ಆದರೆ ಖಬರ್‌ನ ಬಳಿ ಖುರ್‌ಆನ್ ಪಾರಾಯಣ ಗೈಯ್ಯುವುದನ್ನು ಪ್ರವಾದಿ(ﷺ)ರವರು ವಿರೋಧಿಸಿದ್ದಾರೆ. ಪ್ರವಾದಿ(ﷺ)ರವರು ನುಡಿದರು: "ನೀವು ನಿಮ್ಮ ಮನೆಗಳನ್ನು ಖಬರ್‌ನಂತೆ(ಸ್ಮಶಾನದಂತೆ) ಮಾಡದಿರಿ. ಸೂರತುಲ್ ಬಕರಃ ಪಾರಾಯಣ ಗೈಯ್ಯುವ ಮನೆಯಿಂದ ಶೈತಾನನು ಓಡಿ ಹೋಗುವನು"(ಮುಸ್ಲಿಂ)

## ರಾತ್ರಿಯಿಡೀ ಸಂರಕ್ಷಣೆ

ಪ್ರವಾದಿ(ﷺ)ರವರು ನುಡಿಯುತ್ತಾರೆ: "ಯಾರಾದರೂ ಅಲ್ ಬಕರ ಸೂರತಿನ ಕೊನೆಯ ಎರಡು ಆಯತನ್ನು ರಾತ್ರಿ ಪಾರಾಯಣ ಗೈದರೆ ಆತನಿಗೆ ಅದು ಸಾಕಾಗುವುದು" (ಮುತ್ತಫಕುನ್ ಅಲೈಹಿ)

## ಖುರ್‌ಆನಿನ ಅತ್ಯಂತ ಶ್ರೇಷ್ಠವಾದ ಸೂರತ್

ರಾಫಿಲ್ ಇಬ್ನ್ ಮುಅಲ್ಲಾ(ؓ)ರವರಿಂದ ವರದಿ: ಪ್ರವಾದಿ(ﷺ)ರವರು ಅವರಲ್ಲಿ ಹೇಳಿದರು: "ನೀನು ಮಸೀದಿಯಿಂದ ಹೊರಗೆ ಹೋಗುವುದಕ್ಕೆ ಮುಂಚೆ ಖುರ್‌ಆನಿನ ಅತೀ ಶ್ರೇಷ್ಠವಾದ ಸೂರತ್ ನಿನಗೆ ನಾನು ಕಲಿಸಿ ಕೊಡಲೇ? ನಂತರ ನನ್ನ ಕೈ ಹಿಡಿದರು. ಹಾಗೆ ಹೊರಗೆ ಹೋಗಲು ಉದ್ದೇಶಿಸಿದಾಗ ನಾನು ವಿಚಾರಿಸಿದೆ: ಪ್ರವಾದಿಯವರೇ, ಖುರ್‌ಆನಿನ ಅತ್ಯಂತ ಶ್ರೇಷ್ಠವಾದ ಆಯತನ್ನು ಕಲಿಸಿ ಕೊಡುತ್ತೇನೆಂದು ತಾವು ಹೇಳಿದ್ದೀರಲ್ಲವೇ? ಆಗ ಪ್ರವಾದಿ(ﷺ)ರವರು ಹೇಳಿದರು: ಅಲ್‌ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್. ಅದು 7 ಆಯತ್‌ಗಳಾಗಿವೆ"(ಬುಖಾರಿ).

## ಖುರ್‌ಆನಿನ ಅತೀ ಶ್ರೇಷ್ಠವಾದ ಸೂಕ್ತ:

ಪ್ರವಾದಿ(ﷺ)ರವರು ಅಬೂ ಮುನ್‌ದಿರ್‌ರಲ್ಲಿ ಹೇಳಿದರು: ಅಬೂ ಮುನ್‌ದಿರ್, ನಿನಗೆ ಖುರ್‌ಆನಿನ ಅತ್ಯಂತ ಶ್ರೇಷ್ಠವಾದ ಆಯತ್ ಯಾವುದೆಂದು ಗೊತ್ತೇ? ಆಗ ನಾನು ಆಯತುಲ್ ಕುರ್ಸಿ ಪಠಿಸಿದೆನು. ಆಗ ಪ್ರವಾದಿ(ﷺ)ರವರು ನನ್ನ ಎದೆಯ ಮೇಲೆ ಸವರುತ್ತಾ ನನಗೆ ಶುಭಾಶಯವನ್ನು ಅರ್ಪಿಸಿದರು"(ಮುಸ್ಲಿಂ)

## ಮುಅವ್ವಿದತೈನಿಯ ಶ್ರೇಷ್ಠತೆ

ಆಇಶಾ(ರ)ರವರಿಂದ ವರದಿ: ಪ್ರವಾದಿಯವರಿಗೆ ಯಾವುದಾದರೂ ರೋಗ ಬಾಧಿಸಿದರೆ ಮುಅವ್ವಿದತೈನ್ ಪಠಿಸಿ ಶರೀರದ ಮೇಲೆ ಸವರುತ್ತಿದ್ದರು' ಅವರ ರೋಗ ಉಲ್ಭಣ ಗೊಂಡಾಗ ನಾನು ಮುಅವ್ವದತೈನ್ ಪಠಿಸಿ ಪ್ರವಾದಿ(ﷺ)ರವರ ಕೈಗೆ ಊದಿ ನಂತರ ಶರೀರದ ಮೇಲೆ ಪೂರ್ಣವಾಗಿ ಸವರಿದೆನು"(ಬುಖಾರಿ).

## ದಜ್ಜಾಲ್‌ನ ಫಿತ್ನಾದಿಂದ ಸಂರಕ್ಷಣೆ

ಪ್ರವಾದಿ(ﷺ)ರವರು ಹೇಳಿದರು: ಯಾರಾದರೂ ಸೂರತುಲ್ ಕಹ್ಫ್‌ನ ಪ್ರಾರಂಭದ ಹತ್ತು ಸೂಕ್ತಗಳನ್ನು ಹಿಫ್ಝ್(ಕಂಠಪಾಟ) ಮಾಡಿದರೆ ಆತನಿಗೆ ದಜ್ಜಾಲ್‌ನಿಂದ ಸಂರಕ್ಷಣೆ ಲಭಿಸುವುದು" ಇನ್ನೊಂದು ವರದಿಯಲ್ಲಿ ಸೂರತುಲ್ ಕಹ್ಫ್‌ನ ಕೊನೆಯ ಹತ್ತು ಆಯತ್ ಎಂದಿದೆ"(ಮುಸ್ಲಿಂ)

## ಎರಡು ಜುಮುಅಃಗಳ ನಡುವೆ ಪ್ರಕಾಶ ಲಭಿಸುವುದು

ಪ್ರವಾದಿ(ﷺ)ರವರು ಹೇಳಿದರು: ಯಾರಾದರೂ ಶುಕ್ರವಾರದಂದು ಸೂರಃ ಕಹ್ಫ್ ಪಾರಾಯಣ ಗೈದರೆ ಅದು ಆತನಿಗೆ ಎರಡು ಜುಮುಅಃಗಳ ನಡುವೆ ಪ್ರಕಾಶವನ್ನು ನೀಡುವುದು"(ಹಾಕಿಮ್, ಬೈಹಕಿ)

## ಖಬರ್ ಶಿಕ್ಷೆಯಿಂದ ಸಂರಕ್ಷಣೆ

ಪ್ರವಾದಿ(ﷺ)ರವರು ನುಡಿದರು: "ತಬಾರಕ ಎಂಬ ಸೂರತ್ ಖಬರ್ ಶಿಕ್ಷೆಯಿಂದ ಸಂರಕ್ಷಣೆ ನೀಡುವುದು"(ಹಾಕಿಮ್, ಬೈಹಕಿ)

## ಖುರ್‌ಆನಿನ ಮೂರರಲ್ಲೊಂದು

ಪವಿತ್ರ ಖುರ್‌ಆನಿನ ಮೂರರಲ್ಲೊಂದು ಎಂಬ ಹೆಸರಿನಲ್ಲಿ ಅರಿಯಲ್ಪಡುವ ಒಂದು ಸೂರತಿದೆ. ಅದರ ಕುರಿತು ಪ್ರವಾದಿ(ﷺ)ರವರು ಹೇಳಿದರು: "ಖುಲ್ ಹುವಲ್ಲಾಹು ಅಹದ್" ಅಲ್ಲಾಹನಾಣೆ ಖಂಡಿತವಾಗಿಯೂ ಅದು ಖುರ್‌ಆನಿನ ಮೂರರಲ್ಲೊಂದು ಭಾಗಕ್ಕೆ ಸಮಾನವಾಗಿದೆ"(ಬುಖಾರಿ)

## ಸ್ವರ್ಗದಲ್ಲೊಂದು ಭವನ

ಮುಆದ್ ಇಬ್ನ್ ಅನಸ್(ರ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು: ಯಾರಾದರೂ 'ಖುಲ್ ಹುವಲ್ಲಾಹು ಅಹದ್' ಎಂಬ ಸೂರತನ್ನು ಹತ್ತು ಬಾರಿ ಪಾರಾಯಣ ಗೈದರೆ ಅಲ್ಲಾಹನು ಸ್ವರ್ಗದಲ್ಲಿ ಆತನಿಗೊಂದು ಭವನವನ್ನು ನಿರ್ಮಿಸಿ ಕೊಡುವನು"(ಅಹ್ಮದ್)

## ಸ್ವರ್ಗದ ಪಥದಲ್ಲಿ

ಅಬೂ ಹುರೈರಃ(ﷺ)ರವರಿಂದ ವರದಿ: ಪ್ರವಾದಿ(ﷺ)ರವರು ನುಡಿದರು: "ಯಾರಾದರೂ ವಿಧ್ಯಾರ್ಜನೆಯೊಂದಿಗೆ ಹೊರಟರೆ ಅಲ್ಲಾಹನು ಆತನಿಗೆ ಸ್ವರ್ಗದೆಡೆಗಿರುವ ದಾರಿಯನ್ನು ಸರಳ ಗೊಳಿಸುವನು, ಅಲ್ಲಾಹನ ಭವನವಾದ ಮಸೀದಿಯಲ್ಲಿ ಒಂದು ವಿಭಾಗ ಜನರು ಒಟ್ಟುಗೂಡಿ ಅವನ ಗ್ರಂಥವನ್ನು ಪಾರಾಯಣ ಗೈದು, ಅದನ್ನು ಕಲಿತರೆ ಅವರಿಗೆ ಅಲ್ಲಾಹನ ಶಾಂತಿ ಖಂಡಿತ ಲಭಿಸದಿರದು, ಅವರ ಮೇಲೆ ಕಾರುಣ್ಯವು ಬಂದೆರಗುವುದು ಮತ್ತು ಮಲಕ್‌ಗಳು ಆವರನ್ನು ಆವರಿಸುವರು. ಅಲ್ಲಾಹನು ಅವನ ಬಳಿಯಲ್ಲಿರುವವರಲ್ಲಿ ಅವನ ಬಗ್ಗೆ ಹೇಳುವರು.... "(ಮುಸ್ಲಿಂ)

ಕೊನೆಯ ವೇದಗ್ರಂಥವಾದ ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದಕ್ಕೆ ಮತ್ತು ಕಲಿಯುವುದಕ್ಕೆ ಹಲವಾರು ಶ್ರೇಷ್ಠತೆಗಳು ಮತ್ತು ಪ್ರತ್ಯೇಕತೆಗಳಿವೆ. ಸತ್ಯವಿಶ್ವಾಸಿಗಳು ಖುರ್‌ಆನ್ ಪಾರಾಯಣ ಗೈಯುವುದರೊಂದಿಗೆ ಅದನ್ನು ಕಲಿತು ತನ್ನ ಜೀವನದಲ್ಲಿ ಪ್ರಾಯೋಗಿಕರಿಸಬೇಕು. ಪವಿತ್ರ ಖುರ್‌ಆನಿಗನುಸಾರ ತಮ್ಮ ಜೀವನವನ್ನು ರೂಪಿಸಿರುವುದರಿಂದಲೇ ಪ್ರವಾದಿ(ﷺ)ರವರ ಅನುಚರರು ಅಲ್ಲಾಹನ ಪ್ರೀತಿಗೂ ಉತ್ತಮ ಸಮುದಾಯವೆಂಬ ಪ್ರವಾದಿ(ﷺ)ರವರ ಪ್ರಶಂಸೆಗೂ ಪಾತ್ರರಾಗಿರುವುದು. ಆದುದರಿಂದ ಅಲ್ಲಾಹನನ್ನು, ಪ್ರವಾದಿ(ﷺ)ರವರನ್ನು ಮತ್ತು ಸ್ವಹಾಬಿಗಳನ್ನು ಪ್ರೀತಿಸುವವರು ಖುರ್‌ಆನ್ ಕಲಿಯಿರಿ ಮತ್ತು ತಮ್ಮ ಜೀವನವನ್ನು ಆ ಪ್ರಕಾರ ರೂಪಿಸಲು ಸನ್ನದ್ಧರಾಗಿರಿ. ಅದಕ್ಕೆ ಸಾಧ್ಯತೆಯಿರುವ ಸರ್ವ ರೀತಿಯ ಅವಕಾಶವನ್ನೂ ಉಪಯೋಗಿಸಿರಿ. ಅಲ್ಲಾಹನು ಅನುಗ್ರಹಿಸಲಿ. ಆಮೀನ್.

ಖುರ್‌ಆನ್ ಅವತೀರ್ಣವಾದ ಭಾಷೆ ಅರಬಿ. ಆದುದರಿಂದ ಅರಬಿ ವ್ಯಾಕರಣಗಳನ್ನು ಮತ್ತು ಉಚ್ಛಾರಣೆಯ ನಿಯಮಗಳನ್ನು ಪಾಲಿಸಿ ಕೊಂಡೇ ಪವಿತ್ರ ಖುರ್‌ಆನನ್ನು ಪಾರಾಯಣ ಮಾಡಬೇಕು.

ಖುರ್‌ಆನನ್ನು ಹಿಫ್‌ಳ್ ಮಾಡುವುದು ಅತ್ಯಂತ ಪುಣ್ಯವಿರುವ ವಿಷಯವಾಗಿದೆ. ಖುರ್‌ಆನನ್ನು ಹಿಫ್‌ಳ್ ಮಾಡಲು ನಾವು ಸಾಧ್ಯವಾದಷ್ಟು ಪರಿಶ್ರಮಿಸಬೇಕು. ಖುರ್‌ಆನನ್ನು ಹಿಫ್‌ಳ್ ಮಾಡುವುದು ತುಂಬಾ ಸುಲಭ ಕಾರ್ಯವಾಗಿದೆ. ಅದನ್ನು ಕೆಲವೊಮ್ಮೆ ಪುನಃರಾವರ್ತಿಸಿ ಪಠಿಸಿದರೆ ಹಿಫ್‌ಳ್ ಮಾಡಬಹುದು. ಅಲ್ಲಾಹನು ನುಡಿಯುತ್ತಾನೆ:

وَقُرْآنًا فَرَقْنَاهُ لِتَقْرَأَهُ عَلَى النَّاسِ عَلَىٰ مُكْثٍ وَنَزَّلْنَاهُ تَنْزِيلًا

"ಪವಿತ್ರ ಖುರ್‌ಆನನ್ನು ನೀನು ಜನರಿಗೆ ಸಮಾಧಾನದಿಂದ(ನಿಲ್ಲಿಸಿ, ನಿಲ್ಲಿಸಿ) ಓದಿ ಕೇಳಿಸುವ ರೀತಿಯಲ್ಲಿ ಕಾಂಡಗಳಾಗಿಯೂ, ಅಧ್ಯಾಯಗಳಾಗಿಯೂ ನಾವು ಬೇರ್ಪಡಿಸಿದ್ದೇವೆ. ಒಂದು ಪ್ರತ್ಯೇಕ ಕ್ರಮದಲ್ಲಿ ನಾವದನ್ನು ಅವತೀರ್ಣ ಗೊಳಿಸಿದ್ದೇವೆ"(ಇಸ್ರಾಅ್: 106)

ನಾವು ನಮ್ಮ ಮಕ್ಕಳನ್ನು ಖುರ್‌ಆನ್ ಹಿಫ್‌ಳ್ ಮಾಡುವವರನ್ನಾಗಿಸಬೇಕು. ಅದು ಪರಲೋಕದಲ್ಲಿ ನಮಗೊಂದು ಉತ್ತಮ ಪ್ರತಿಫಲಾರ್ಹವಾದ ಕರ್ಮವಾಗಿ ಬಿಡುವುದು. ನಮ್ಮ ಊರುಗಳಲ್ಲಿ ಅನೇಕ ಧಾರ್ಮಿಕ ವಿಧ್ಯಾಲಯಗಳು ಮಕ್ಕಳಿಗೆ ಖುರ್‌ಆನ್ ಹಿಫ್‌ಳ್ ಮಾಡಲಿಕ್ಕಿರುವ ಸೌರ್ಯಗಳನ್ನು ಒದಗಿಸಿದೆ. ಅವುಗಳ ಉಪಯೋಗವನ್ನು ಪಡೆಯಿರಿ. ಅಲ್ಲಾಹನು ಅನುಗ್ರಹಿಸಿರಿ. ಆಮೀನ್.

**ಸಯ್ಯಿದ್ ಸಅಫರ್ ಸ್ವಾದಿಕ್ (ಮಲಯಾಳಂ)**

**ಅನುವಾದ: ಅಬ್ದುಲ್ ಮಜೀದ್ ಎಸ್. ಎಮ್**